# ಲಂಗೋಟಿ ಬಲುಪ್ರೊಳ್ಳೆದಣ್ಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Note:** Lyrics mentioned here are as per Ref. 1. The wordings in Ref. 2 and Ref. 3 are slightly different and are not considered here.
5. **Note:** Singer has followed these wordings.

ರಾಗ: ನಾದನಾಮಕ್ರಿಯ ತಾಳ: ಅಟ

ಲಂಗೋಟಿ ಬಲುಪ್ರೊಳ್ಳೆದಣ್ಣ, ಒಬ್ಬ –
ಹಂಗಿಲ್ಲದೆ ಮಡಿಗೆ ಒದಗುವುದಣ್ಣ || ಪ ||

ಬಡವರಿಗಾಧಾರವಣ್ಣ, ಈ ಲಂಗೋಟಿ
ಬೈರಾಗಿಗಳ ಭಾಗ್ಯವಣ್ಣ
ಕಡು ಕಳ್ಳರಿಗೆ ಗಂಡ, ಮಡಿ ಧೋತ್ರಗಳ ಮಿಂಡ
ನಡುಗುವ ಸಮಯಕ್ಕೆ ಮಡಿಗೆ ಒದಗುವಂಥ || 1 ||

ಜಿತಮನ ಸನ್ಯಾಸಿಗಳಿಗಿದೆ ಕೌಪೀನ
ವ್ರತವುಳ್ಳ ಬ್ರಹ್ಮಚಾರಿಗೆ ಮುಖ್ಯವು
ಅತಿಶಯವಿದೆ ಆಂಜನೇಯ ನಾರದರಿಗೆ
ಗತಿಯಿಲ್ಲದವರಿಗೆ ಮಿತವಾಗಿ ಇರುವಂಥ || 2 ||

ದುಡ್ಡು ಮುಟ್ಟದಂತೆ ದೊರಕುವ ವಸ್ತುವು
ದೊಡ್ಡ ಅರಣ್ಯದಿ ಭಯವಿಲ್ಲವು
ಹೆಡ್ಡರೆಂಬುವರೇನೊ ಲಂಗೋಟಿ ಜನರನ್ನು
ದೊಡ್ಡವರೆಂದು ವಂದಿಸುವರು ಯತಿಗಳ || 3 ||

ಮೋಕ್ಷ ಮಾರ್ಗಕೆ ಕಲ್ಪವೃಕ್ಷವೀ ಲಂಗೋಟಿ
ಭಿಕ್ಷಗಾರರಿಗೆಲ್ಲ ಅನುಕೂಲವು
ತತ್‍ಕ್ಷಣದೊಳಗೆ ಕಾರ್ಯಗಳ ತೂಗಿಸಿ ಮಾನ-
ರಕ್ಷಣೆಗೆ ಬಹು ರಮ್ಯವಾಗಿರುವಂಥ || 4 ||

ಮಡಿವಾಳರಿಗೆ ಶತ್ರು, ಮಠದಯ್ಯಗಳ ಮಿತ್ರ
ಪೊಡವಿಯೊಳ್ ಯಾಚಕರಿಗೆ ನೆರವು
ದೃಢಭಕ್ತ ಬಲಿ ಚಕ್ರವರ್ತಿಗೋಸ್ಕರ ನಮ್ಮ
ಒಡೆಯ ಶ್ರೀ ಪುರಂದರ ವಿಠಲ ದರಿಸಿದಂಥ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸಂಪತ್ತಿನ ಉಪಾಧಿ ಒಳ್ಳೆಯದಲ್ಲವೆಂಬುದನ್ನು ದಾಸರು ತಮ್ಮ ಈ ಲಂಗೋಟಿಯ ಪದದಲ್ಲಿ ವಿನೋದವಾಗಿ ವಿವರಿಸಿದ್ದಾರೆ.

ಇಲ್ಲಿ ಲಂಗೋಟಿಯೆಂದರೆ ಮೊಳಕಾಲಿಂದ ಮೇಲೆ ಸೊಂಟದವರೆಗೆ ಮೈಮುಚ್ಚುವ ಬಟ್ಟೆ; ಸಂಸ್ಕೃತದಲ್ಲಿ ಕೌಪೀನ ('ಮೇಖಲಾಬದ್ಧ ಪರಿಧೇಯ ವಸ್ತ್ರಖಂಡಂ,' ಸೊಂಟಕ್ಕೆ ಸುತ್ತುವ ತುಂಡುಬಟ್ಟೆ) ಇದನ್ನು ಸಂನ್ಯಾಸಿಗಳಿಗೇ ವಿಶೇಷವಾಗಿ ಹೇಳಿದ್ದರೂ, ಹರಿದಾಸರಿಗೂ ಇದು ಒಪ್ಪುತ್ತದೆ; ಮಧುಕರ ವೃತ್ತಿಯಂತೆ. ಊಟದ ಸಾಮಗ್ರಿಗಾಗಿ ತಿರುಪೆ ಎತ್ತುವುದರಿಂದ ಅದರ ಅವಲಂಬನೆ ಹರಿದಾಸರಿಗಿಲ್ಲ; ಹಾಗೆಯೇ ತುಂಡು ಬಟ್ಟೆಯನ್ನು ಉಡುವುದರಿಂದ ಲೌಕಿಕರಂತೆ ಉಡುಗೆ ತೊಡುಗೆಗಳ ಅವಲಂಬನೆಯೂ ಇರದು. 'ಒಬ್ಬರ ಹಂಗೂ ಇರದು.' ಈ ಹಾಡಿನಲ್ಲಿ ಹರಿದಾಸರಿಗೂ ಸಂನ್ಯಾಸಿಗಳಿಗೂ ಇರುವ ಹೋಲಿಕೆಯನ್ನು ಸೂಚಿಸಿದ್ದಾರೆ.

**ಜಿತಮನ** = ಮನಸ್ಸನ್ನು ಗೆದ್ದವರು

**ಮಡಿವಾಳರಿಗೆ ಶತ್ರು –** ಇದನ್ನು ಮಡಿಮಾಡಲು ಯಾರೂ ಯಾವ ಮಡಿವಾಳನಿಗೂ (ಅಗಸನಿಗೂ) ಕೊಡಬೇಕಾದುದಿಲ್ಲ; ಇದನ್ನೇ ಬಳಸುವವರು ಮಡಿವಾಳನ ಹಂಗನ್ನೇ ತೊರೆದವರು. ಸಾಮಾನ್ಯ ಜನರಿಂದ ಮಡಿವಾಳನಿಗೆ ಆಗುವ ಲಾಭ ಲಂಗೋಟಿಯವರಿಂದ ಆಗಲಾರದು; ಆದ್ದರಿಂದ ಮಡಿವಾಳ ಅದನ್ನು ಸಿಟ್ಟಿನಿಂದ ಕಾಣುವುದು ಸಹಜವೇ.

**ಮಠದಯ್ಯಗಳ** – ಮಠದ ಸ್ವಾಮಿಗಳ.

**ದೃಢಭಕ್ತ ಬಲಿ ಚಕ್ರವರ್ತಿ... –** ಇಂದ್ರನಿಗೆ ಮತ್ತೆ ಸ್ವರ್ಗ ಲೋಕವನ್ನು ದೈತ್ಯನಾದ ಆದರೆ ವಿಷ್ಣು ಭಕ್ತನಾದ ಬಲಿಯಿಂದ ದೊರಕಿಸಿಕೊಡುವ ಸಲುವಾಗಿ ವಿಷ್ಣುವು ಬಾಲ ಬ್ರಹ್ಮಚಾರಿಯಂತೆ ಬಂದು ಬಲಿಯಿಂದ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿದುದು ವಾಮನಾವತಾರದ ಕಥೆ. ಈ ಸಂದರ್ಭದಲ್ಲಿ ವಾಮನನು ಸಣ್ಣ ಹುಡುಗನಾಗಿ ಕೌಪೀನ ಮಾತ್ರ ಧಾರಿಯಾಗಿ ದಂಡ ಕಮಂಡಲುಗಳನ್ನು ಹಿಡಿದು ಬಂದನೆಂದು ವಿವರ.

**Classification:** Keerthane
**Ankita:** sri purandara vittala
**Location:** NA
**Category:** Jeevana Darshana, Haridasa Deekshe
**Sub-Category:** langoti, badava, madi, sadhu, kalla, pati, mana, vrata, hanuma, narada, rokka, kaadu, bhaya, jana, moksha, mukti, kalpavruksha, bhikshe, mitra, bali, shatru,
**Pravachana:** NA
**Explanation:** NA